ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,
ರಾಷ್ಟ್ರೀಯ ಸೇವಾ ಯೋಜನೆ ಕೋಶ,

## ಕೆ.ಎಲ್.ಎಸ್. ಪದವಿ ಕಾಲೇಜು, ಹಳಿಯಾಳ (ಉ.ಕ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತರಾಜ್ ಇಲಾಖೆ, ಜಿಲ್ಲಾ ಪಂಚಾಯತ ಉತ್ತರ ಕನ್ನಡ, ತಾಲೂಕು ಪಂಚಾಯತ ಹಳಿಯಾಳ,ಗ್ರಾಮ ಪಂಚಾಯತ ಕೇಸರೊಳ್ಳಿ, ಗ್ರಾಮ ಕೇಸರೊಳ್ಳಿ

ಇವರ ಸಹಯೋಗದಲ್ಲಿ

ರಾಷ್ಟ್ರೀಯ ಸೇವಾ ಯೋಜನೆ ಘಟಕದ

# ವಾರ್ಷಿಕ ವಿಶೇಷ ಶಿಬಿರ 2025-26

## ಸಂಕ್ಷಿಪ್ತ ವರದಿ

ಧ್ಯೇಯ: "ನನ್ನ ಭಾರತಕ್ಕಾಗಿ ಯುವ ಜನತೆ"

ಶಿಬಿರದ ಸ್ಥಳ : ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಕೇಸರೊಳ್ಳಿ, ತಾ: ಹಳಿಯಾಳ

ದಿನಾಂಕ : 27-11-2025 ರಿಂದ 03-12-2025

NSS PROGRAMME OFFICER
KLS DEGREE COLLEGE
HALIYAL -581329
KARNATAKA STATE

Principal
K L. S Degree College,
Haliyal-581329.
College Code: P10GKG0267

# ಶಿಬಿರದ ದೈನಂದಿನ ಕಾರ್ಯಕ್ರಮಗಳು

| ಸಮಯ | ಕಾರ್ಯಕ್ರಮದ ವಿವರ |
|---|---|
| 06.15 ರಿಂದ 07.30 | ಧ್ವಜಾರೋಹಣ ಮತ್ತು ವ್ಯಾಯಾಮ |
| 07.30 ರಿಂದ 08.30 | ಉಪಹಾರ |
| 08.30 ರಿಂದ 12.30 | ಶ್ರಮದಾನ |
| 12.30 ರಿಂದ 03.00 | ಸ್ನಾನ, ಊಟ, ಕಾರ್ಯಕ್ರಮ ಸಿದ್ಧತೆ |
| 03.00 ರಿಂದ 05.00 | ಉಪನ್ಯಾಸ ಕಾರ್ಯಕ್ರಮ |
| 05.00 ರಿಂದ 06.00 | ಧ್ವಜಾ ಆವರೋಹಣ |
| 06.00 ರಿಂದ 07.30 | ಸಾಂಸ್ಕೃತಿಕ ಕಾರ್ಯಕ್ರಮಗಳು |
| 08.00 ರಿಂದ 09.45 | ಭೋಜನ, ಧ್ವಜ ಹಸ್ತಾಂತರ ಹಿತನುಡಿ |
| 10.00 ರಿಂದ | ಶುಭರಾತ್ರಿ |

## ದಿನ: 01

**ದಿನಾಂಕ: 27-11-2025**

ಕೇಸರೊಳ್ಳಿ ಗ್ರಾಮದಲ್ಲಿ ಕೆ ಎಲ್ ಎಸ್ ಕಾಲೇಜಿನ ಎನ್ ಎಸ್ ಎಸ್ ವಾರ್ಷಿಕ ವಿಶೇಷ ಶಿಬಿರದ ಉದ್ಘಾಟನೆ. ಹಳಿಯಾಳದ ಕೆ ಎಲ್ ಎಸ್ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನಾ ಘಟಕದ ವಿಶೇಷ ಶಿಬಿರ ಉದ್ಘಾಟನೆಯನ್ನು ಕೇಸರೊಳ್ಳಿ ಗ್ರಾಮ ಪಂಚಾಯತ ಪಿಡಿಓ ಸತೀಶ ಪೂಜಾರಿ ಹಾಗೂ ಪಂಚಾಯತಿ ಅಧ್ಯಕ್ಷರಾದ ಪರಶುರಾಮ ಕರಗಸಕರ ನೆರವೇರಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಲಕ್ಷ್ಮಿ ಮಾತಾ ಟ್ರಸ್ಟ ಸದಸ್ಯರಾದ ಡೊಂಗ್ರು ಜುವೇಕರ್ ಮಾತನಾಡಿ ನಗರ ಕೇಂದ್ರಿತ ಕಾಲೇಜಿನ ವಿದ್ಯಾರ್ಥಿಗಳು ಗ್ರಾಮೀಣ ಮಟ್ಟದಲ್ಲಿ ಬಂದು ಶ್ರಮದಾನ, ಸ್ವಚ್ಛತೆ ಅರಿವು ಮೂಡಿಸುವುದು ಹಾಗೂ ವಿವಿಧ ವಿವಿಧ ಉಪನ್ಯಾಸ ಕಾರ್ಯಕ್ರಮಗಳನ್ನು ಆಯೋಜಿಸಿದ್ದು ಉತ್ತಮ ಕಾರ್ಯವಾಗಿದೆ ಎಂದು ಹೇಳಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಚಾರ್ಯರಾದ ಶ್ರೀನಿವಾಸ ಪ್ರಭುರವರು ಮಾತನಾಡಿ ಕೇಸರೊಳ್ಳಿ ಗ್ರಾಮದ ಜನರ ಸಹಕಾರದೊಂದಿಗೆ ಶಿಬಿರವನ್ನು ಆಯೋಜಿಸಿದ್ದು, ನಮ್ಮ ವಿದ್ಯಾರ್ಥಿಗಳಿಗೆ ಗ್ರಾಮೀಣ ಮಟ್ಟದ ಬದುಕು, ಮೂಲಭೂತ ಸೌಕರ್ಯಗಳು, ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನ ವೃದ್ಧಿಸುವ ಮಹತ್ವದ ಕಾರ್ಯ ರಾಷ್ಟ್ರೀಯ ಸೇವಾ ಯೋಜನೆ ಮಾಡುತ್ತಿದ್ದು ಇದರ ಅಂಗವಾಗಿ ಈ ಶಿಬಿರವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅತಿಥಿಗಳಾದ ಕೇಸರೊಳ್ಳಿ ಶ್ರೀ ಲಕ್ಷ್ಮಿ ಮಾತ ಅಧ್ಯಕ್ಷರಾದ ಗಿರಿಜಾರಾಮ್ ಅಳವಣಕರ, ಕೇಸರೊಳ್ಳಿ ಶಾಲೆಯ ಎಸ್ ಡಿ ಎಮ್ ಸಿ ಅಧ್ಯಕ್ಷರಾದ ಸುರೇಶ ಕುರುಬರ, ಕಾಲೇಜಿನ ಶೈಕ್ಷಣಿಕ ಸಂಜಯೋಜಕಿ ದೀಪಾ ನಾಯ್ಕ ವೇದಿಕೆ ಮೇಲಿದ್ದರು. ಎನ್ ಎಸ್ ಎಸ್ ಅಧಿಕಾರಿಯಾದ ಶಾಂತಾರಾಮ ಚಿಬ್ಬುಲಕರ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಿಬಿರಾರ್ಥಿ, ರಾಜೇಶ್ವರಿ ಬಡಿಗೇರ್ ನಿರೂಪಿಸಿದರು. ಸಮೀಕ್ಷಾ ವಾಲೆಕರ್ ವಂದಿಸಿದರು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ವರುಣ್ ಪಾಟೀಲ್ ಮಲ್ಲಿಕಾರ್ಜುನ್ ಕಾಜಗಾರ್ , ಸಿಬ್ಬಂದಿಗಳಾದ ನಾಗೇಂದ್ರ ಖಂಡೇಕರ್, ಹರ್ಷದ ಮಿಂಡೋಳ್ಕರ್ ಹಾಗೂ ಆದರ್ಶ ಕಲ್ಲೂರ ಊರಿನ ಪ್ರಮುಖರು ಹಾಗೂ ಶಿಬಿರಾರ್ಥಿಗಳು ಉಪಸ್ಥಿತರಿದ್ದರು.

**ಎನ್ ಎಸ್ ಎಸ್ ವಾರ್ಷಿಕ ಶಿಬಿರ**

**ಹಳಿಯಾಳ:**



**ಕೆಎಲ್ಎಸ್ ಕಾಲೇಜಿನ ಎನ್ಎಸ್ಎಸ್ ವಾರ್ಷಿಕ ವಿಶೇಷ ಶಿಬಿರಕ್ಕೆ ಚಾಲನೆ**





## ದಿನ: 02

### ದಿನಾಂಕ: 28-11-2025

ಶಿಬಿರದ 2ನೇಯ ದಿನ ಬೆಳಿಗ್ಗೆ ಎನ್ ಎಸ್ ಎಸ್ ಧ್ವಜಾರೋಹಣ ನೇರವೇರಿಸಿ, ಕೇಸರೊಳ್ಳಿ ಗ್ರಾಮದ ಮುಖ್ಯ ರಸ್ತೆಯ ಸ್ವಚ್ಛತೆ ಮಾಡಲಾಯಿತು.

ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕೇಸರೊಳ್ಳಿ ಗ್ರಾಮದಲ್ಲಿ ನಡೆದ ವಿಶೇಷ ವಾರ್ಷಿಕ ಶಿಬಿರದ ಎರಡನೇ ದಿನದ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ಉಪನ್ಯಾಸಕರಾಗಿ ಆಗಮಿಸಿದ ಹಳಿಯಾಳ ವಲಯ ಗಸ್ತು ಅರಣ್ಯ ಪಾಲಕರಾದ ಶಂಕರಾನಂದ ಜಿಡ್ಡಿಮನಿ ಅವರು ಹಾವು ನಾವು ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಹಾವುಗಳ ಪ್ರಭೇದಗಳು, ನಿಸರ್ಗಕ್ಕೆ ಹಾವಿನ ಅವಶ್ಯಕತೆ, ಸರ್ಪ ಕಡಿತದ ಚಿಕಿತ್ಸೆ, ಜೀವ ಪ್ರಪಂಚದ ಮುಂತಾದ ವಿಷಯದ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿ ಹಳಿಯಾಳ ವಿಜಯವಾಣಿ ವರದಿಗಾರರಾದ ಯೋಗರಾಜ ಎಸ್ ಕೆ ಮಾತನಾಡಿ ಯುವಕರು ಮೊಬೈಲ್ ದಾಸರಾಗದೆ ಸಾಧನೆ ಕಡೆ ಮುಖ ಮಾಡಬೇಕು, ಉತ್ತಮ ಪ್ರಜೆಯಾಗಿ ದೇಶ ಸೇವೆ ಮಾಡಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ವಾಣಿಜ್ಯ ವಿಭಾಗದ ಮುಖ್ಯಸ್ಥೆ ನಮ್ರತಾ ಗುರವ ವಹಿಸಿದ್ದರು, ಶ್ರೀಮಾತಾ ಟ್ರಸ್ಟ ನ ಸದಸ್ಯರಾದ ಡೊಂಗ್ರು ಜುವೇಕರ, ಆನಂದು ಗುಡಗೇರಿ, ಉದಯವಾಣಿ ವರದಿಗಾರ ವಿನಾಯಕ ಮೇಟಿ, ಎನ್ ಎಸ್ ಎಸ್ ಅಧಿಕಾರಿ ಶಾಂತಾರಾಮ ಚಿಬ್ಬುಲಕರ ವೇದಿಕೆ ಮೇಲಿದ್ದರು. ಶಾಲ್ಮಲಾ ತಂಡದ ಶಿಬಿರಾರ್ಥಿಗಳಾದ ಐಶ್ವರ್ಯ ವಾಲೇಕರ ನಿರೂಪಣೆ, ಲಾವಣ್ಯ ಹಿರೇಕರ ಸ್ವಾಗತಿಸಿದರು ರಕ್ಷಿತಾ ಮಿರಾಶಿ ವಂದಿಸಿದರು.ವಿಷಯ: "ಅಡುಗೆ ಅನಿಲ ಸುರಕ್ಷತೆ ಮತ್ತು ಸದ್ಬಳಕೆ"





ಹೊಸ ದಿಗಂತ

13

30-Nov 2025

## ಹಾವು-ನಾವು ವಿಷಯದ ಕುರಿತು ಉಪನ್ಯಾಸ









## ದಿನ: 03

**ದಿನಾಂಕ: 29-11-2025**

ಶಿಬಿರದ ಮೂರನೇಯ ದಿನ ಬೆಳಿಗ್ಗೆ, ಎನ್ ಎಸ್ ಎಸ್ ಧ್ವಜಾರೋಹಣ ನೇರವೆರಿಸಿ, ತಿಮ್ಮಾಪುರ ಗ್ರಾಮದ ಶಾಲಾ ಆವರಣದಲ್ಲಿ ಸ್ವಚ್ಛತೆ ಮಾಡಲಾಯಿತು.

ಕೆ.ಎಲ್.ಎಸ್ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದಿಂದ ಕೆಸರೊಳ್ಳಿ ಗ್ರಾಮದಲ್ಲಿ ನಡೆದ ವಿಶೇಷ ವಾರ್ಷಿಕ ಶಿಬಿರದ ಮೂರನೇ ದಿನದ ಉಪನ್ಯಾಸ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮಕ್ಕೆ ಉಪನ್ಯಾಸಕರಾಗಿ ಆಗಮಿಸಿದ ಹೊಸದಿಗಂತ ಪತ್ರಿಕೆಯ ವರದಿಗಾರ ಹಾಗೂ ತಾಲೂಕಿನ ಬಹುಮುಖ ಪ್ರತಿಭೆ, ಕವಿ,ಸಂಗೀತಗಾರ, ಸಮಾಜ ಸೇವಕ, ವಾಗ್ಮಿ, ಸಂಜು ಕೋಳೂರ ಅವರು 'ಸದೃಢ ಭಾರತ ಹಾಗೂ ಯುವ ಶಕ್ತಿ' ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಭಾರತದ ಆರ್ಥಿಕತೆ, ಅಭಿವೃದ್ಧಿ, ಸಾಮಾಜಿಕ, ಶೈಕ್ಷಣಿಕ, ಸಮಾನತೆ, ಪೋಕ್ಸೊ, ಸೈಬರ್ ಕ್ರೈಂ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಆಹಾರ ಪದ್ಧತಿಯ ಅಳವಡಿಕೆ, ಸಮಯ ಹೊಂದಾಣಿಕೆ, ಮೊಬೈಲ್ ಬಳಕೆಯ ಮಹತ್ವ ಮತ್ತು ಬಳಕೆಯ ನಿಯಂತ್ರಣ ಹೀಗೆ ಹತ್ತು ಹಲವಾರು ವಿಷಯದ ಕುರಿತು ಒಂದು ತಾಸಿಗೂ ಹೆಚ್ಚಿನ ಸಮಯ ನಿರರ್ಗಳವಾಗಿ ಮಾತನಾಡಿ ಮಾಹಿತಿ ನೀಡಿದರು. ಉಪನ್ಯಾಸದ ಪ್ರಾರಂಭದಲ್ಲಿ ಅವರೇ ತುರ್ತಾಗಿ ಸ್ಥಳದಲ್ಲೇ ರಚಿಸಿದ ವಿಷಯಕ್ಕೆ ಸಂಬಂಧಿಸಿದ 'ಎತ್ತ ಸಾಗುತಿದೆ ಭಾರತ' ಎಂಬ ಕವನ ವಾಚನದ ಮೂಲಕ ಶಿಬಿರಾರ್ಥಿಗಳ ಮನಗೆಲ್ಲುವಲ್ಲಿ ಯಶಸ್ವಿಯಾದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕೆಎಲ್ಎಸ್ ಕಾಲೇಜಿನ ಪ್ರಾಧ್ಯಾಪಕರಾದ ವರುಣ ಪಾಟೀಲ್ ವಹಿಸಿದ್ದರು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಕೇಸರೊಳ್ಳಿಯ ಶ್ರೀಮಾತಾ ಟ್ರಸ್ಟ ನ ಸದಸ್ಯರಾದ ಡೊಂಗ್ರು ಜುವೇಕರ, ಚನ್ನಪ್ಪ ಕೇಸರಕರ, ಸಿದ್ಧರಾಮ ಜಡಿ, ನಾಗೇಂದ್ರ ಖಂಡೇಕರ, ಎನ್ ಎಸ್ ಎಸ್ ಅಧಿಕಾರಿ ಶಾಂತಾರಾಮ ಚಿಬ್ಬುಲಕರ ಇದ್ದರು ಶಿಬಿರಾರ್ಥಿಗಳಾದ ಸೋನಿ ಜುನಾಜೆ ನಿರೂಪಣೆ, ಶ್ರೇಯಸ್ ಪಾಟೀಲ್ ಸ್ವಾಗತಿಸಿದರು ಪ್ರಜ್ವಲ್ ಗೋಂಧಳಿ ವಂದಿಸಿದರು..


ಹೊಸ ದಿಗಂತ

**ಸದೃಢ ಭಾರತ ನಿರ್ಮಾಣಕ್ಕೆ ಯುವಕರು ಸಹಕರಿಸಲಿ: ಸಂಜು ಕೋಳೂರ**





## ದಿನ: 04

### ದಿನಾಂಕ: 30-11-2025

ಶಿಬಿರದ ನಾಲ್ಕನೇಯ ದಿನ ಬೆಳಿಗ್ಗೆ ಎನ್ ಎಸ್ ಎಸ್ ಧ್ವಜಾರೋಹಣ ನೇರವೇರಿಸಿ ಕೇಸರೊಳ್ಳಿ ಗ್ರಾಮದ ಕೆರೆಯ ಸುತ್ತ ಸ್ವಚ್ಛತೆ ಮಾಡಲಾಯಿತು.

ಕೆ.ಎಲ್.ಎಸ್ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕೇಸರೊಳ್ಳಿ ಗ್ರಾಮದಲ್ಲಿ ನಡೆದ ವಿಶೇಷ ವಾರ್ಷಿಕ ಶಿಬಿರದ ನಾಲ್ಕನೇಯ ದಿನದ ಉಪನ್ಯಾಸ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮಕ್ಕೆ ಆಗಮಿಸಿದ ಹಳಿಯಾಳದ ಅಂಗಡಿ ಗ್ಯಾಸ ಸರ್ವಿಸ್ ಮಾಲಕರಾದ ಸುಮಂಗಲಾ ಅಂಗಡಿ "ಅಡುಗೆ ಅನಿಲ ಸುರಕ್ಷತೆ ಮತ್ತು ಸದ್ಬಳಕೆ" ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಕೇಸರೊಳ್ಳಿ ಗ್ರಾಮದ ಗೃಹೀಣಿಯರಿಗೆ ಗ್ಯಾಸ್ ಅತ್ಯಂತ ಅವಶ್ಯಕವಾಗಿದ್ದು ಬಳಕೆಯ ಬಗ್ಗೆ ಜಾಗೃತ ವಹಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಧ್ಯಾಪಕರಾದ ಮಾಧವ ಸುರತ್ಕರ ಮಾತನಾಡಿ ವಿದ್ಯಾರ್ಥಿಗಳು ಕೇಸರೊಳ್ಳಿ ಗ್ರಾಮದ ಜನರಲ್ಲಿ ಆರೋಗ್ಯ ಹಾಗೂ ಸುರಕ್ಷತೆಯ ಬಗ್ಗೆ ಮಾಹಿತಿ ನೀಡಬೇಕು ಎಂದು ಹೇಳಿದರು.

ಕಾಲೇಜು ಸಿಬ್ಬಂದಿ ಅಕ್ಷತಾ ಹುಲಿಕೇರಿ, ಶೀತಲ ತೋರಸ್ಕರ, ಎನ್ ಎಸ್ ಎಸ್ ಅಧಿಕಾರಿ ಶಾಂತಾರಾಮ ಚಿಬ್ಬುಲಕರ ವೇದಿಕೆ ಮೇಲಿದ್ದರು. ಸಹ ಶಿಬಿರಾಧಿಕಾರಿ ಹನುಮಂತಿ ಮೋರೆ, ಸಿಬ್ಬಂದಿಗಳಾದ ರವಿ ಕಲಭಾವಿ, ಹರ್ಷದ ಮಿಂಡೋಲ್ಕರ್, ಆದರ್ಶ ಕಲ್ಲೂರ, ಶಿಬಿರಾರ್ಥಿಗಳು ಹಾಗೂ ಕೇಸರೊಳ್ಳಿ ಗ್ರಾಮದ ಜನರು ಉಪಸ್ಥರಿದ್ದರು. ದೀಪಾ ಮಾವಳಂಗಿ ನಿರೂಪಣೆ, ಸುಶ್ರೀತಾ ಸ್ವಾಗತಿಸಿದರು ವನಿತಾ ಮಿರಾಶಿ ವಂದಿಸಿದರು.









## ದಿನ: 05

### ದಿನಾಂಕ: 01-12-2025

ಶಿಬಿರದ ಐದನೇಯ ದಿನ ಬೆಳಿಗ್ಗೆ, ಎನ್ ಎಸ್ ಎಸ್ ಧ್ವಜಾರೋಹಣ ನೇರವೇರಿಸಲಾಯಿತು. ಕೇಸರೊಳ್ಳಿ ಗ್ರಾಮದ ಯುವಕರಿಗಾಗಿ ಕಬ್ಬಡ್ಡಿ ಮೈದಾನವನ್ನು ಮಾಡಿಕೊಡಲಾಗಿದೆ.

ಕೆ.ಎಲ್.ಎಸ್ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕೇಸರೊಳ್ಳಿ ಗ್ರಾಮದಲ್ಲಿ ನಡೆದ ವಿಶೇಷ ವಾರ್ಷಿಕ ಶಿಬಿರದ ಐದನೇ ದಿನದ ಉಪನ್ಯಾಸ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮಕ್ಕೆ ಆಗಮಿಸಿದ ಹಳಿಯಾಳದ ವೈದ್ಯರಾದ ದೀಪಕ ಕಲ್ಮಠ ಅವರು ಆರೋಗ್ಯವೇ ಭಾಗ್ಯ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಆರೋಗ್ಯಕ್ಕೆ ಮುಖ್ಯವಾದದ್ದು ಆಹಾರ, ವ್ಯಸನ ಮುಕ್ತ ಹಾಗೂ ಒತ್ತಡರಹಿತ ಬದುಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಧ್ಯಾಪಕಿ ಸಂಗೀತಾ ಪ್ರಭು ಮಾತನಾಡಿ ಶಿಬಿರವು ವಿದ್ಯಾರ್ಥಿಗಳಲ್ಲಿ ಧನಾತ್ಮಕವಾಗಿರುವ ಬದಲಾವಣೆಯನ್ನು ತಂದಿದೆ. ವಿದ್ಯಾರ್ಥಿಗಳು ತಮ್ಮ ಅಮೂಲ್ಯ ಸಮಯ ಈ ಶಿಬಿರದಲ್ಲಿ ಉತ್ತಮವಾದ ಕಾರ್ಯಕ್ಕಾಗಿ ವಿನಿಯೋಗಿಸಿದ್ದಾರೆ ಎಂದು ಹೇಳಿದರು.

ಕಾಲೇಜು ಸಿಬ್ಬಂದಿ ಅಕ್ಷತಾ ಹುಲಿಕೇರಿ, ಶೀತಲ ತೋರಸ್ಕರ, ಎನ್ ಎಸ್ ಎಸ್ ಅಧಿಕಾರಿ ಶಾಂತಾರಾಮ ಚಿಬ್ಬುಲಕರ ವೇದಿಕೆ ಮೇಲಿದ್ದರು. ಸಹ ಶಿಬಿರಾಧಿಕಾರಿ ಹನುಮಂತಿ ಮೋರೆ, ಸಿಬ್ಬಂದಿಗಳಾದ ರವಿ ಕಲಭಾವಿ, ಹರ್ಷದ ಮಿಂಡೋಲ್ಕರ್, ಆದರ್ಶ ಕಲ್ಲೂರ, ಶಿಬಿರಾರ್ಥಿಗಳು ಹಾಗೂ ಕೇಸರೊಳ್ಳಿ ಗ್ರಾಮದ ಜನರು ಉಪಸ್ಥರಿದ್ದರು. ದೀಪಾ ಮಾವಳಂಗಿ ನಿರೂಪಣೆ, ಸುಶ್ರೀತಾ ಸ್ವಾಗತಿಸಿದರು ವನಿತಾ ಮಿರಾಶಿ ವಂದಿಸಿದರು.

**ಆರೋಗ್ಯವೇ ಭಾಗ್ಯ ಕುರಿತು ಉಪನ್ಯಾಸ**











## ದಿನ: 05

### ದಿನಾಂಕ: 01-12-2025

ಶಿಬಿರದ ಐದನೇಯ ದಿನ ಬೆಳಿಗ್ಗೆ ಎನ್ ಎಸ್ ಎಸ್ ಧ್ವಜಾರೋಹಣ ನೇರವೆರಿಸಲಾಯಿತು. ಕೇಸರೊಳ್ಳಿ ಗ್ರಾಮದ ಯುವಕರಿಗಾಗಿ ಕಬ್ಬಡ್ಡಿ ಮೈದಾನವನ್ನು ಮಾಡಿಕೊಡಲಾಗಿದೆ..

ಕೆ.ಎಲ್.ಎಸ್ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕೇಸರೊಳ್ಳಿ ಗ್ರಾಮದಲ್ಲಿ ನಡೆದ ವಿಶೇಷ ವಾರ್ಷಿಕ ಶಿಬಿರದ ಐದನೇ ದಿನದ ಉಪನ್ಯಾಸ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮಕ್ಕೆ ಆಗಮಿಸಿದ ಹಳಿಯಾಳದ ವೈದ್ಯರಾದ ದೀಪಕ ಕಲ್ಕೂರ ಅವರು ಆರೋಗ್ಯವೇ ಭಾಗ್ಯ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಆರೋಗ್ಯಕ್ಕೆ ಮುಖ್ಯವಾದದ್ದು ಆಹಾರ, ವ್ಯಸನ ಮುಕ್ತ ಹಾಗೂ ಒತ್ತಡರಹಿತ ಬದುಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಧ್ಯಾಪಕಿ ಸಂಗೀತಾ ಪ್ರಭು ಮಾತನಾಡಿ ಶಿಬಿರವು ವಿದ್ಯಾರ್ಥಿಗಳಲ್ಲಿ ಧನಾತ್ಮಕವಾಗಿರುವ ಬದಲಾವಣೆಯನ್ನು ತಂದಿದೆ. ವಿದ್ಯಾರ್ಥಿಗಳು ತಮ್ಮ ಅಮೂಲ್ಯ ಸಮಯ ಈ ಶಿಬಿರದಲ್ಲಿ ಉತ್ತಮವಾದ ಕಾರ್ಯಕ್ಕಾಗಿ ವಿನಿಯೋಗಿಸಿದ್ದಾರೆ ಎಂದು ಹೇಳಿದರು.

ಕಾಲೇಜು ಸಿಬ್ಬಂದಿ ಅಕ್ಷತಾ ಹುಲಿಕೇರಿ, ಶೀತಲ ತೋರಸ್ಕರ, ಎನ್ ಎಸ್ ಎಸ್ ಅಧಿಕಾರಿ ಶಾಂತಾರಾಮ ಚಿಬ್ಬುಲಕರ ವೇದಿಕೆ ಮೇಲಿದ್ದರು. ಸಹ ಶಿಬಿರಾಧಿಕಾರಿ ಹನುಮಂತಿ ಮೋರೆ, ಸಿಬ್ಬಂದಿಗಳಾದ ರವಿ ಕಲಭಾವಿ, ಹರ್ಷದ ಮಿಂಡೋಲ್ಕರ್, ಆದರ್ಶ ಕಲ್ಲೂರ, ಶಿಬಿರಾರ್ಥಿಗಳು ಹಾಗೂ ಕೇಸರೊಳ್ಳಿ ಗ್ರಾಮದ ಜನರು ಉಪಸ್ಥರಿದ್ದರು. ದೀಪಾ ಮಾವಳಂಗಿ ನಿರೂಪಣೆ, ಸುಶ್ರೀತಾ ಸ್ವಾಗತಿಸಿದರು ವನಿತಾ ಮಿರಾಶಿ ವಂದಿಸಿದರು.



ಆರೋಗ್ಯವೇ ಭಾಗ್ಯ ಕುರಿತು ಉಪನ್ಯಾಸ

**ಹಳಿಯಾಳ:** [illegible]









## ದಿನ: 06

### ದಿನಾಂಕ: 02-12-2025

ಶಿಬಿರದ ಆರನೇಯ ದಿನ ಬೆಳಿಗ್ಗೆ, ಎನ್ ಎಸ್ ಎಸ್ ಧ್ವಜಾರೋಹಣ ನೇರವೇರಿಸಲಾಯಿತು. ಕೇಸರೊಳ್ಳಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕಂಪೌಂಡ ಗೋಡೆಗೆ ಬಣ್ಣ ಹಚ್ಚಲಾಯಿತು.

ಕೆ.ಎಲ್.ಎಸ್ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕೇಸರೊಳ್ಳಿ ಗ್ರಾಮದಲ್ಲಿ ನಡೆದ ವಿಶೇಷ ವಾರ್ಷಿಕ ಶಿಬಿರದ ಆರನೇ ದಿನದ ಉಪನ್ಯಾಸ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮಕ್ಕೆ ಆಗಮಿಸಿದ ಹಳಿಯಾಳದ ಕೃಷಿ ಸಹಾಯಕ ನಿರ್ದೇಶಕರಾದ ಪಿ ಐ ಮಾನೆ ಅವರು ಕಬ್ಬಿನ ಆಧುನಿಕ ಬೇಸಾಯ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಹಳಿಯಾಳದಲ್ಲಿ ಕಬ್ಬಿನ ಇಳುವರಿ ಕಡಿಮೆ ಇದ್ದು, ಕಬ್ಬಿನ ಹೊಸ ತಳಿಯ ಬೀಜ, ಕೊಟ್ಟಿಗೆ ಗೊಬ್ಬರ, ಹನಿನೀರಾವರಿ, ಕಳೆ ನಿಯಂತ್ರಣ, ರವದಿ ಕೊಳೆಯುವಂತೆ ಮಾಡಿರುವುದು ಉತ್ಪಾದನೆ ಹೆಚ್ಚಿಸಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಧ್ಯಾಪಕಿ ಮೆಹ್ತಾಬ್ ಶೇಕ್ ವಹಿಸಿದ್ದರು, ಕೇಸರೊಳ್ಳಿ ಶ್ರೀ ಲಕ್ಷ್ಮಿ ಮಾತಾ ಟ್ರಸ್ಟ ಕಾರ್ಯದರ್ಶಿ ರಾಘವೇಂದ್ರ ನಾಯ್ಕ, ಸದಸ್ಯರಾದ ಡೊಂಗ್ರು ಕೇಸ್ರೆಕರ, ಸುರೇಶ ಶಹಾಪುರಕರ, ಮಂಜುನಾಥ ಕೇಸ್ರೆಕರ, ಊರು ಹಿರಿಯರಾದ ಪ್ರಕಾಶ ಶಹಾಪುರಕರ, ಕರಾವಳಿ ಮುಂಜಾವು ಪತ್ರಕರ್ತ ಶಿವಾನಂದ ಜಿವೋಜಿ, ಪ್ರಾಧ್ಯಾಪಕಿ ಪ್ರಗತಿ ಲಕ್ಕುಂಡಿ, ಗ್ರಂಥಪಾಲಕ ಸಂಜಯ ಕುಲಕರ್ಣಿ, ಎನ್ ಎಸ್ ಎಸ್ ಅಧಿಕಾರಿ ಶಾಂತಾರಾಮ ಚಿಬ್ಬುಲಕರ ವೇದಿಕೆ ಮೇಲಿದ್ದರು. ಸಹ ಶಿಬಿರಾಧಿಕಾರಿ ಹನುಮಂತಿ ಮೋರೆ, ಸಿಬ್ಬಂದಿಗಳಾದ ಯಲಪ್ಪ ಮಾದರ ಹರ್ಷದ ಮಿಂಡೋಲ್ಕರ್, ಆದರ್ಶ ಕಲ್ಲೂರ, ಶಿಬಿರಾರ್ಥಿಗಳು ಹಾಗೂ ಕೇಸರೊಳ್ಳಿ ಗ್ರಾಮದ ಜನರು ಉಪಸ್ಥರಿದ್ದರು. ನಂದಿನಿ ದೇಸುರಕರ ನಿರೂಪಣೆ, ಶೈಲಾ ಮಿರಾಶಿ ಸ್ವಾಗತಿಸಿದರು ಸಂಜು ಜಡಿ ವಂದಿಸಿದರು.















## ದಿನ: 07

**ದಿನಾಂಕ: 03-12-2025**

ಕೆ.ಎಲ್.ಎಸ್ ಪದವಿ ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದ ಕೇಸರೊಳ್ಳಿ ಗ್ರಾಮದಲ್ಲಿ ನಡೆದ ಏಳು ದಿನಗಳ ವಿಶೇಷ ವಾರ್ಷಿಕ ಶಿಬಿರದ ಸಮಾರೋಪಗೊಂಡಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಲಕ್ಷ್ಮಿ ಮಾತಾ ಟ್ರಸ್ಟ ಸದಸ್ಯರಾದ ಆನಂದ ಗುಡಗೇರಿ ಮಾತನಾಡಿ ನಿರಂತರ ಪ್ರಯತ್ನ ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ ಎನ್ಎಸ್ಎಸ್ ಶಿಬಿರವು ವ್ಯಕ್ತಿತ್ವ ವಿಕಸನ ಹಾಗೂ ವಿವಿಧ ಸಮಾಜಮುಖಿ ಕಾರ್ಯಗಳ ಕುರಿತು ಅರಿವನ್ನು ಮೂಡಿಸಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಕಾಲೇಜಿನ ಪ್ರಾಚಾರ್ಯರಾದ ಶ್ರೀನಿವಾಸ ಪ್ರಭುರವರು ಮಾತನಾಡಿ ಕೇಸರೊಳ್ಳಿ ಗ್ರಾಮದ ಜನರ ಸಹಕಾರದೊಂದಿಗೆ ಶಿಬಿರ ಯಶಸ್ವಿಯಾಗಿದೆ ವಿದ್ಯಾರ್ಥಿಗಳು ಗ್ರಾಮ ವಾಸ್ತವ್ಯ ಕುಂದು ಕೊರತೆಗಳು ಹಾಗೂ ತಮ್ಮ ಬದುಕಿನ ಮೌಲ್ಯಗಳನ್ನು ಇಲ್ಲಿ ತಿಳಿದುಕೊಂಡಿದ್ದಾರೆ ಇದು ವಿದ್ಯಾರ್ಥಿ ಜೀವನ ಬಹು ಮುಖ್ಯ ಶಿಬಿರವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಅತಿಥಿಗಳಾದ ಕೇಸರೊಳ್ಳಿ ಶ್ರೀ ಲಕ್ಷ್ಮಿ ಮಾತಾ ಟ್ರಸ್ಟ ಅಧ್ಯಕ್ಷರಾದ ಗಿರಿಜಾರಾಮ್ ಅಳವಣಕರ, ಗ್ರಾಮ ಪಂಚಾಯತಿ ಅಧ್ಯಕ್ಷರಾದ ಪರಶುರಾಮ ಕರಗಸಕರ, ಪ್ರಾಧ್ಯಾಪಕಿ ಅನುಷಾ ನಾಯ್ಕವಾಡಕರ ಸಹ ಶಿಬಿರಾಧಿಕಾರಿ ಮಲ್ಲಿಕಾರ್ಜುನ ಕಾಜಗಾರ, ಹನುಮಂತಿ ಮೋರೆ, ಎನ್ ಎಸ್ ಎಸ್ ಅಧಿಕಾರಿಯಾದ ಶಾಂತಾರಾಮ ಚಿಬ್ಬುಲಕರ ವೇದಿಕೆ ಮೇಲಿದ್ದರು. ಕಾರ್ಯಕ್ರಮದಲ್ಲಿ ಶ್ರೀಲಕ್ಷ್ಮೀ ಮಾತಾ ಟ್ರಸ್ಟ ಕೇಸರೋಳಿ ಸದಸ್ಯರು ಗ್ರಾಮ ಪಂಚಾಯತಿಯ ಸಿಬ್ಬಂದಿ ವರ್ಗ ಕಾಲೇಜು ಸಿಬ್ಬಂದಿ ವರ್ಗ ಶಿಬಿರಾರ್ಥಿಗಳು ಹಾಗೂ ಕೇಸರೋಳಿ ಗ್ರಾಮದ ಪ್ರಮುಖರು ಹಾಜರಿದ್ದರು

ಎಚ್ಐವಿ ಜಾಗೃತಿ ಕುರಿತು ಜಿಲ್ಲಾ ಪಂಚಾಯತ್ ಪ್ರಾಯೋಜಕತ್ವದ ಶ್ರೀಕೃಷ್ಣಪಾರಿಜಾತ ನಾಟಕ ಪ್ರದರ್ಶನಗೊಂಡಿತು.



**ಹಳಿಯಾಳ ಪಟ್ಟಣದ ಕೆ.ಎಲ್.ಎಸ್. ಪದವಿ ಕಾಲೇಜಿನ ಎನ್ಎಸ್ಎಸ್ ಶಿಬಿರ ಸಂಪನ್ನ**



**ಕೆಎಲ್ಎಸ್ ಕಾಲೇಜಿನ ಎನ್ಎಸ್ಎಸ್ ವಾರ್ಷಿಕ ವಿಶೇಷ ಶಿಬಿರಕ್ಕೆ ಚಾಲನೆ**





















NSS PROGRAMME OFFICER
KLS DEGREE COLLEGE
HALIYAL -581329
KARNATAKA STATE

Principal
K L. S Degree College,
Haliyal-581329.
College Code: P10GKG0267